ಅನುಬಂಧ-2

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೊಂದಾಯಿಸಿರುವ ವಕೀಲರುಗಳ ತಾಲ್ಲೂಕುವಾರು ಸಂಖ್ಯಾ ವಿವರಗಳು

1.	ಮಂಗಳೂರು ನಗರ	723
2.	ಉಡುಪಿ	256
3.	ಕಾರ್ಕಳ	192
4.	ಬೆಳ್ತಂಗಡಿ	50
5.	ಭಂಟ್ವಾಳ	123
6.	ಕುಂದಾಪುರ	85
7.	ಪುತ್ತೂರು	180
8.	ಸುಳ್ಯ	60

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೊಂದಾಯಿಸಿರುವ ಒಟ್ಟು ವಕೀಲರು 1,669.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:- ಸನ್ಮಾನ್ಯ ಅಧ್ಯಕ್ಷರೆ, ವಕೀಲರುಗಳ ಸಂಖ್ಯೆ ಏಕೆ ಕೇಳಿದ್ದೇನೆಂದರೆ, ಅವರುಗಳಿಗೆ ಕೊಡಬೇಕಾದ ಸೌಲಭ್ಯಗಳನ್ನು ಕೊಡುವುದಕ್ಕೆ ಆಗುತ್ತಿದೆಯೇ? ಕೋರ್ಟ್‌ಗಳಲ್ಲಿ ಕುರ್ಚಿಗಳ ಸಂಖ್ಯೆ ಕಡಿಮೆಯಾಗಿದೆ. ಒಂದು ರೀತಿ ಮ್ಯೂಸಿಕ್ ಛೇರ್ ತರಹ ಒಬ್ಬರು ಎದ್ದ ಮೇಲೆ ಇನ್ನೊಬ್ಬರು ಕುಳಿತುಕೊಳ್ಳುವಂಥ ಪರಿಸ್ಥಿತಿ ಉಂಟಾಗಿದೆ. ಇದರ ಜೊತೆಗೆ ಅವರುಗಳ ರೂಂಗಳಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವೆ?

ಶ್ರೀ ಎಂ. ಸಿ. ನಾಣಯ್ಯ:- ಮಾನ್ಯ ಅಧ್ಯಕ್ಷರೆ, ವಕೀಲರುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವ ಬಗ್ಗೆ ಮಾನ್ಯ ಸದಸ್ಯರು ಗಮನ ಸೆಳೆದಿದ್ದಾರೆ. ರಾಜ್ಯದಲ್ಲಿರುವ ಹಳೆಯ ಕೋರ್ಟ್‌ಗಳಲ್ಲಿ ಪೀಠೋಪಕರಣಗಳ ಸಂಖ್ಯೆ ಕಡಿಮೆ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೊಸದಾಗಿ ಕಟ್ಟತಕ್ಕಂಥ ಕೋರ್ಟ್ ಕಟ್ಟಡಗಳಲ್ಲಿ ಅಲ್ಲಿಗೆ ಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತಿದ್ದೇವೆ. ಹಳೆ ಕೋರ್ಟ್‌ಗಳಲ್ಲಿ ಪೀಠೋಪಕರಣಗಳು ಮತ್ತು ಲೈಬ್ರರಿ ವ್ಯವಸ್ಥೆ ಇಲ್ಲದಿರುವುದನ್ನು ಮನಗಂಡು ಈಗಾಗಲೇ ಕೆಲವು ಕಡೆ ಎಲ್ಲಾ ಸೌಲಭ್ಯ ಒದಿಗಿಸಿಕೊಡಲಾಗಿದೆ. ಇನ್ನು ಬಾಕಿ ಉಳಿದಿರುವ ಹಳೆ ಕೋರ್ಟ್‌ಗಳಿಗೆ ಹಣ ಕಾಸಿನ ಮುಗ್ಗಟ್ಟಿನ ಪರಿಸ್ಥಿತಿಯನ್ನು ನೋಡಿಕೊಂಡು ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತದೆ. ಒಟ್ಟಿನಲ್ಲಿ ಅವರ ಕ್ಷೇಮವನ್ನು ಸರ್ಕಾರ ನೋಡಿಕೊಳ್ಳುತ್ತದೆ ಕಾರಣ, ನಾನೂ ಅದೇ ಗುಂಪಿಗೆ ಸೇರಿದವನು.

ವಿಷಯ:- ಜಾನುವಾರಗಳ ಗಣತಿ ವೈದ್ಯಕೀಯ ಸೌಲಭ್ಯಗಳು.

50(564)

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಜಾನುವಾರು ಗಣತಿ ಎಷ್ಟು ವರ್ಷಗಳಿಗೊಮ್ಮೆ ನಡೆಸಲಾಗುತ್ತಿದೆ; ಕಳೆದ ಪ್ರಾಣಿವಾರು ಜನಗಣತಿಯ ಅಂಕಿ ಸಂಖ್ಯೆ ಒದಗಿಸುವುದು;

ಆ) ರಾಜ್ಯದಲ್ಲಿರುವ ಕೃತಕ ಗರ್ಭಧಾರಣೆ ಕೇಂದ್ರಗಳು, ಪ್ರಾಥಮಿಕ ಪಶುವೈದ್ಯಕೀಯ ಚಿಕಿತ್ಸಾ ಕೇಂದ್ರಗಳು, ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಇತರ ಆಸ್ಪತ್ರೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು;

ಇ) ರಾಜ್ಯದಲ್ಲಿರುವ ಕುರಿ ಸಂಗೋಪನಾ ಕೇಂದ್ರ ಸ್ಥಳಗಳಾವುವು, ಇವುಗಳ ವಿಸ್ತೀರ್ಣ ಎಷ್ಟು, ಪ್ರತಿಯೊಂದು ಕೇಂದ್ರದಲ್ಲಿರುವ ಕುರಿಗಳ ಸಂಖ್ಯೆ ಎಷ್ಟು, ಖಾಲಿಯಾಗಿ ಉಳಿದಿರುವ ಜಮೀನಿನ ವಿಸ್ತೀರ್ಣ ಎಷ್ಟು;

ಈ) ಕುರಿ ಮತ್ತು ಉಣ್ಣೆ ಉತ್ಪಾದನೆ ಸಲುವಾಗಿ; ವಿದೇಶ ರಾಷ್ಟ್ರಗಳಿಂದ ಆರ್ಥಿಕ ಸಹಾಯ ಕೋರಿದೆಯೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):-

ಅ) 5 ವರ್ಷಗಳಿಗೊಮ್ಮೆ

ಬಿ) 1990ರ ಜಾನುವಾರು ಗಣತಿಯ ಪ್ರಕಾರ

ದನಗಳು	:	101.76 ಲಕ್ಷಗಳು
ಎಮ್ಮೆಗಳು	:	40.37 ಲಕ್ಷಗಳು
ಕುರಿಗಳು	:	47.27 ಲಕ್ಷಗಳು
ಮೇಕೆಗಳು	:	38.89 ಲಕ್ಷಗಳು
ಹಂದಿಗಳು	:	03.04 ಲಕ್ಷಗಳು
ನಾಯಿಗಳು	:	17.79 ಲಕ್ಷಗಳು
ಇತರೆ ಪ್ರಾಣಿಗಳು	:	0.56 ಲಕ್ಷಗಳು
ಕುಕ್ಕುಟಗಳು	:	156.94 ಲಕ್ಷಗಳು
ಪಶು ಆಸ್ಪತ್ರೆಗಳು	:	244
ಪಶು ಚಿಕಿತ್ಸಾಲಯ	:	700
ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	:	1920
ಕೃತಕ ಗರ್ಭಧಾರಣಾ ಕೇಂದ್ರಗಳು	:	400
ಸಂಚಾರಿ ಪಶು ಚಿಕಿತ್ಸಾಲಯ	:	173

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ತೋರಿಸಲಾಗಿದೆ)

ಕ್ಷೇತ್ರದ ಹೆಸರು	ಹೆಕ್ಟೇರು	ಸಂಖ್ಯೆಗಳಲ್ಲಿ	ಖಾಲಿ ಜಮೀನು
ದೊಡ್ಡ ಪ್ರಮಾಣದ ಕುರಿ ಸಂವರ್ಧನಾ ಕ್ಷೇತ್ರ, ಚಳ್ಳಕೆರೆ.	3962	1756	ಖಾಲಿ
ಕುರಿ ಸಂವರ್ಧನಾ ಕ್ಷೇತ್ರ, ಧನಗೂರು.	243	664	ಇಲ್ಲ
ಕುರಿ ಸಂವರ್ಧನಾ ಕ್ಷೇತ್ರ, ಸುತ್ತಟ್ಟಿ.	55	207	ಅದೇ
ಕುರಿ ಸಂವರ್ಧನಾ ಕ್ಷೇತ್ರ, ಗುತ್ತಲ್.	83	488	ಅದೇ

ಈ) ಇಲ್ಲಾ.

ಅನುಬಂಧ

ರಾಜ್ಯದಲ್ಲಿರುವ ಪಶುವೈದ್ಯಕೀಯ ಸಂಸ್ಥೆಗಳ ವಿವರಗಳು

ಕ್ರ. ಸಂ.	ಜಿಲ್ಲೆಯ ಹೆಸರು	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	ಒಟ್ಟು	ಸಂಚಾರಿ ಪಶು ಚಿಕಿತ್ಸಾಲಯ	ಕೃತಕ ಗರ್ಭಧಾರಣಾ ಕೇಂದ್ರ ಉಪಕೇಂದ್ರ
1.	ಬೆಂಗಳೂರು ನಗರ	16	36	40	92	3	24
2.	ಬೆಂಗಳೂರು ಗ್ರಾಮಾಂತರ	12	33	84	129	8	36
3.	ಶಿವಮೊಗ್ಗ	12	38	119	169	9	19
4.	ಚಿತ್ರದುರ್ಗ	10	40	118	168	9	20
5.	ಕೋಲಾರ	15	41	70	126	11	34
6.	ತುಮಕೂರು	12	49	104	165	10	18
7.	ಮೈಸೂರು	16	42	130	188	11	21
8.	ಚಿಕ್ಕಮಗಳೂರು	8	28	59	95	7	5
9.	ದಕ್ಷಿಣ ಕನ್ನಡ	14	39	87	140	8	9
10.	ಹಾಸನ	11	37	100	148	8	9
11.	ಕೊಡಗು	6	17	27	50	3	18
12.	ಮಂಡ್ಯ	19	61	92	172	7	4

ಕ್ರ. ಸಂ.	ಜಿಲ್ಲೆಯ ಹೆಸರು	ಪಶು ಆಸ್ಪತ್ರೆ	ಪಶು ಚಿಕಿತ್ಸಾಲಯ	ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ	ಒಟ್ಟು	ಸಂಚಾರಿ ಪಶು ಚಿಕಿತ್ಸಾಲಯ	ಕೃತಕ ಗರ್ಭಧಾರಣಾ ಕೇಂದ್ರ ಉಪಕೇಂದ್ರ
13.	ಬಿಜಾಪುರ	13	24	156	193	8	12
14.	ಧಾರವಾಡ	20	48	152	220	17	66
15.	ಉತ್ತರ ಕನ್ನಡ	11	22	62	95	12	21
16.	ಬೆಳಗಾವಿ	12	43	124	179	10	31
17.	ರಾಯಚೂರು	13	17	94	124	9	17
18.	ಗುಲ್ಬರ್ಗ	11	35	190	236	10	20
19.	ಬಳ್ಳಾರಿ	8	24	61	93	8	8
20.	ಬೀದರ್	5	26	51	82	5	8
	ಒಟ್ಟು	244	700	1920	2864	173	400

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೆ, ಈ ಉತ್ತರದಲ್ಲಿ 1990 ರಲ್ಲಿ ಮಾಡಿರುವ ಜಾನುವಾರು ಗಣತಿಯನ್ನು ಕೊಡಲಾಗಿದೆ. ನಾನು ಕೇಳುತ್ತಿರುವುದು ಲೇಟೆಸ್ಟ್ ಸೆನ್ಸಸ್. 1995-96ರಲ್ಲಿ ಮಾಡಿದಂಥ ಗಣತಿಯ ಅಂಕಿ ಸಂಖ್ಯೆಗಳನ್ನು ಕೊಟ್ಟರೆ ಒಳ್ಳೆಯದು. ಜಾನುವಾರು ಸಂಖ್ಯೆಗಳ ಅನುಸಾರವಾಗಿ ಇಡೀ ರಾಜ್ಯಕ್ಕೆ ಔಷಧಿ ಪೂರೈಕೆಯಾಗುತ್ತಿದೆಯೇ? ಆಮೇಲೆ ಕುರಿ ಮತ್ತು ಮೇಕೆ ಸಾಕಾಣಿಕೆಯಿಂದ ರಾಜ್ಯಕ್ಕೆ ಹೆಚ್ಚು ಲಾಭವಾಗುತ್ತಿದೆ. ಕುರಿ ಉಣ್ಣೆ ಮತ್ತು ಮಾಂಸದಿಂದ ಎಷ್ಟು ಉತ್ಪಾದನೆಯಾಗುತ್ತಿದೆ ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ಸಾಮಾನ್ಯವಾಗಿ ಜಾನುವಾರು ಗಣತಿಯನ್ನು 5 ವರ್ಷಗಳಿಗೊಮ್ಮೆ ಮಾತ್ರ ಮಾಡಲಾಗುತ್ತದೆ. 1990ನೇ ಇಸವಿಯಲ್ಲಿ ರಾಜ್ಯ ಸರ್ಕಾರವು ಜಾನುವಾರು ಗಣತಿಯನ್ನು ಮಾಡಿಸಿತ್ತು. ಇದರ ಜೊತೆಗೆ 1992ನೇ ಇಸವಿಯಲ್ಲಿ ಇಡೀ ರಾಷ್ಟ್ರದ ಜಾನುವಾರುಗಳ ಗಣತಿಯನ್ನು ಕೇಂದ್ರ ಸರ್ಕಾರವು ಮಾಡಿಸಿತ್ತು. ಈಗ ಪುನಃ ನಾವು 1997ನೇ ಅಕ್ಟೋಬರ್‌ನಿಂದ ಜಾನುವಾರು ಗಣತಿಯನ್ನು ಪ್ರಾರಂಭ ಮಾಡಿಸುತ್ತೇವೆ. ಆಮೇಲೆ ಮಾನ್ಯ ಸದಸ್ಯರು ಔಷಧಿಗಳನ್ನು ಒದಗಿಸುವ ಬಗ್ಗೆ ಕೇಳಿದ್ದಾರೆ. ಅಗತ್ಯವಾಗಿ ಬೇಕಾಗಿರತಕ್ಕಂಥ ಎಲ್ಲಾ ಔಷಧಿಗಳನ್ನು ಒದಗಿಸಲಾಗುತ್ತಿದೆ. ಆದರೆ, ಕುರಿಗಳಲ್ಲಿ ವಿಶೇಷವಾದ ಒಂದು ಬ್ಲೂಟ್ ಎನ್ನತಕ್ಕಂಥ ಡಿಸೀಸ್ ಆಗಾಗ್ಗೆ ಬರುತ್ತಿರುತ್ತದೆ. ಆ ಖಾಯಿಲೆಗೆ ಸುಮಾರು 24 ತರಹದ ರೋಗಾಣುಗಳನ್ನು ಗುರುತಿಸಲಾಗಿದೆ. ಯಾವ ಯಾವ ರೋಗಾಣುಗಳಿಗೆ ಯಾವ ತರಹದ ಔಷಧಿಗಳನ್ನು ಕೊಡಬೇಕೆಂಬ ಬಗ್ಗೆ ಇನ್ನೂ ಗೊಂದಲವಿರುವುದರಿಂದ ಆ ಬಗ್ಗೆ ಈಗಾಗಲೇ ಹಿರಿಯ ಅಧಿಕಾರಿಗಳೊಡನೆ ಮತ್ತು ವಿಜ್ಞಾನಿಗಳೊಡನೆ ಚರ್ಚೆ ಮಾಡಿ ಸೂಕ್ತ ಲಸಿಕೆಯನ್ನು ಕಂಡು ಹಿಡಿಯಲಿಕ್ಕೆ ಸೂಚನೆಯನ್ನು ಕೊಟ್ಟಿದ್ದೇನೆ. ಅಷ್ಟೇ ಅಲ್ಲದೆ ಇವತ್ತು ನಮ್ಮ ರಾಜ್ಯದಲ್ಲಿ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿ ಅಸ್ತಿತ್ವದಲ್ಲಿ ಬಂದಿದೆ. ಈ ಮಂಡಳಿಯು ಬಹಳಷ್ಟು ಕೆಲಸವನ್ನು ಈ ರಾಜ್ಯದಲ್ಲಿ ಮಾಡಿಕೊಂಡು ಬರುತ್ತಿದೆ. ಕೃಷಿಯ ಹೊಸ ನೀತಿ ಪ್ರಕಾರ ಇದರ ಅಭಿವೃದ್ಧಿಗೆ 393 ಕೋಟಿ ರೂಪಾಯಿಗಳ ಆರ್ಥಿಕ ಸಹಾಯ ಬೇಕಾಗುವುದರಿಂದ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ಈಗಾಗಲೇ ನಾವು ಪ್ರಪೋಸಲ್ ಕೊಟ್ಟಿದ್ದೇವೆ. ಇದರ ಜೊತೆಗೆ ಕುರಿ, ಮೇಕೆ ಮತ್ತು ಮೊಲಗಳ ಅಭಿವೃದ್ಧಿಗಾಗಿಯೇ 100 ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ. ನಮ್ಮ ರಾಜ್ಯದಲ್ಲಿ ನಾಲ್ಕು ಕುರಿ ತಳಿ ಸಂವರ್ಧನ ಕೇಂದ್ರಗಳಿವೆ. ಚಳ್ಳಕೆರೆಯಲ್ಲಿರುವ ಕೇಂದ್ರವು ಮಿಶ್ರ ತಳಿ ಕುರಿ ಅಭಿವೃದ್ಧಿ ಕೆಲಸವನ್ನು ನೋಡಿಕೊಳ್ಳುತ್ತಿದೆ, ಮೈಸೂರು-ಮಂಡ್ಯ ಕಡೆ ಸಿಗತಕ್ಕಂಥ ಬನ್ನೂರು ಕುರಿ ತಳಿ ಅಭಿವೃದ್ಧಿಯನ್ನು ದರ್ಗೂರಿನಲ್ಲಿ ಮಾಡಲಾಗುತ್ತಿದೆ. ಇದರ ಜೊತೆಗೆ 'ಸುತ್ತಟ್ಟಿ ಮತ್ತು ಗುತ್ತಲ' ಕೇಂದ್ರಗಳಲ್ಲೂ ಕುರಿ ಅಭಿವೃದ್ಧಿ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೆ, ಉಣ್ಣೆ ಉತ್ಪಾದನೆಯಲ್ಲಿ ನಮ್ಮ ರಾಜ್ಯವು ರಾಷ್ಟ್ರದಲ್ಲಿ ಪ್ರಥಮ ಸ್ಥಾನದಲ್ಲಿದೆ. ಆದ್ದರಿಂದ, ಸರ್ಕಾರದವರೇ ಒಂದು ಫ್ಯಾಕ್ಟರಿಯನ್ನು ಪ್ರಾರಂಭ ಮಾಡಿ ಉಣ್ಣೆ ಅಭಿವೃದ್ಧಿಗೆ ಏತಕ್ಕೋಸ್ಕರ ಪ್ರಯತ್ನ ಮಾಡಬಾರದು? ಈ ದಿಸೆಯಲ್ಲಿ ತಾವು ಪ್ರಯತ್ನ ಮಾಡಿದರೆ ಮಾನ್ಯ ಮಂತ್ರಿಯವರಿಗೆ ಒಳ್ಳೆ ಹೆಸರು ಮತ್ತು ಕೀರ್ತಿ ಬರುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ:- ಇದರ ಬಗ್ಗೆ ಆಲೋಚನೆ ಮಾಡುತ್ತೇವೆ.

ಶ್ರೀ ಜಯರಾಮಶೆಟ್ಟ:- ನಮ್ಮ ರಾಜ್ಯದಲ್ಲಿ ಕಸಾಯಿ ಖಾನೆಗಳು ಬಹಳಷ್ಟಿವೆ;

ಅಧ್ಯಕ್ಷರು:- ಈ ಪ್ರಶ್ನೆಯನ್ನು ನೋಟೀಸ್ ಕೊಟ್ಟು ಕೇಳಬೇಕಾಗುತ್ತದೆ. ಈಗಲೇ ಆ ಪ್ರಶ್ನೆ ಕೇಳುತ್ತಿರುವುದರಿಂದ ಮಾನ್ಯ ಮಂತ್ರಿಯವರು ಅದಕ್ಕೆ ಉತ್ತರವನ್ನು ತಂದಿರುವುದಿಲ್ಲ. ಮಂತ್ರಿಗಳು ಸರ್ವಜ್ಞರಲ್ಲ. ನೀವು ಪ್ರಶ್ನೆ ಕೇಳಿದರೆ ಅವರು ಆ ಕಡೆ ನೋಡುತ್ತಾರೆ, ನೋಟೀಸ್ ಇಲ್ಲದೆ ಉತ್ತರ ಹೇಳುವುದಕ್ಕಾಗುತ್ತದೆಯೇ?

ಶ್ರೀ ಜಯರಾಮಶೆಟ್ಟ:- ನನ್ನ ಪ್ರಶ್ನೆ ಇಷ್ಟೇ, ಈಗಿರುವ ಕಸಾಯಿ ಖಾನೆಗಳನ್ನು ಆಧುನೀಕರಣಗೊಳಿಸಬೇಕೆಂದಷ್ಟೇ ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಕೇಳುತ್ತೆನೆ.

ಶ್ರೀ ಬಿ.ಬಿ. ನಿಂಗಯ್ಯ:- ಈ ಸಲಹೆಯನ್ನು ಪರಿಗಣಿಸಲಾಗುವುದು.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ 173 ಸಂಚಾರಿ ಪಶು ಚಿಕಿತ್ಸಾಲಯಗಳಿವೆಯೆಂದು ಮಾನ್ಯ ಮಂತ್ರಿಯವರು ತಿಳಿಸಿದ್ದಾರೆ. ಅವುಗಳಲ್ಲಿ ಎಷ್ಟು ಚಾಲುನಲ್ಲಿ ಇವೆ? ಮತ್ತು ಎಷ್ಟು ಚಾಲುನಲ್ಲಿ ಇಲ್ಲ ಎಂಬ ಬಗ್ಗೆ ದಯಮಾಡಿ ಇನ್‌ಫರ್ಮೇಷನ್ ಕೊಡಬೇಕು. ನನ್ನ ಕ್ಷೇತ್ರದ ತೀರ್ಥಹಳ್ಳಿಯಲ್ಲಿ ಒಂದು ಸಂಚಾರಿ ಪಶು ಚಿಕಿತ್ಸಾಲಯವು ಸುಮಾರು 4 ವರ್ಷಗಳಿಂದ ಅದನ್ನು ಓಡಿಸಲು ಡ್ರೈವರ್ ಇಲ್ಲದೆ ನಿಂತು ಹೋಗಿದೆ. ಈ ಬಗ್ಗೆ ಎರಡು ವರ್ಷದಲ್ಲಿ ನಾಲ್ಕು ಬಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದೇನೆ ತಾವೂ ಕೂಡಾ ಮಧ್ಯೆ ಪ್ರವೇಶ ಮಾಡಿ ಇದರ ಬಗ್ಗೆ ಗಮನಹರಿಸಬೇಕೆಂದು ಮಾನ್ಯ ಮಂತ್ರಿಯವರಿಗೆ ನಿರ್ದೇಶನ ಕೂಡ ಕೊಟ್ಟಿದ್ದಿರಿ. ಆದರೂ ಇದುವರೆಗೂ ಚಾಲಕನನ್ನು ಕೊಡದೆ ಅದನ್ನು ಚಾಲು ಸ್ಥಿತಿಗೆ ತರಲಿಲ್ಲ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸುಮಾರು 2,864 ಆಸ್ಪತ್ರೆಗಳು ವಿವಿಧ ಹಂತದಲ್ಲಿ ಕೆಲಸ ಮಾಡುತ್ತಿವೆ. ನಮ್ಮ ಇಲಾಖೆಯಲ್ಲಿ ವಿವಿಧ ದರ್ಜೆಯ 2,575 ಹುದ್ದೆಗಳು ಖಾಲಿ ಇವೆ, ಅದರಲ್ಲಿ ಡ್ರೈವರ್‌ಗಳ ಹುದ್ದೆಗಳೂ ಸೇರಿಸಿಕೊಂಡಿವೆ. ಚಾಲಕರುಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ಜಿಲ್ಲಾ ಪಂಚಾಯಿತಿಗೆ ಇರುವುದರಿಂದ, ಈಗಾಗಲೇ ಅವರಿಗೆ ಸೂಚನೆ ಕೊಟ್ಟು ಎಲ್ಲೆಲ್ಲಿ ವಾಹನ ಚಾಲಕರುಗಳಿಲ್ಲವೋ ಅಲ್ಲಿ ತುಂಬ-ಬೇಕೆಂದು ತಿಳಿಸಲಾಗಿದೆ.

ಅಧ್ಯಕ್ಷರು:- ತಾವುಗಳು ಜಾನುವಾರು ಜನ ಗಣತಿ ಮಾಹಿತಿಯನ್ನು ಮತ್ತು ಪಶು ಚಿಕಿತ್ಸಾ ಕೇಂದ್ರಗಳನ್ನು ಜಿಲ್ಲಾವಾರು ಎಷ್ಟಿವೆ ಎಂಬ ಮಾಹಿತಿಗಳನ್ನು ಕೊಟ್ಟಿದ್ದೀರಿ. ಜಿಲ್ಲಾವಾರು ಜಾನುವಾರುಗಳ ಸಂಖ್ಯೆಗನುಗುಣವಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗಿದೆಯೋ? ಅಥವಾ ಬೇರೆ ಕಾರಣಗಳಿಗೆ ಕೆಲವು ಕಡೆ ಹೆಚ್ಚು ಪಶು ಚಿಕಿತ್ಸಾಲಯಗಳನ್ನು ತೆರೆಯಲಾಗಿದೆಯೋ?

ಶ್ರೀ ಬಿ.ಬಿ. ನಿಂಗಯ್ಯ:- ಅದರ ಬಗ್ಗೆ ಹೇಳುತ್ತೇನೆ. ಈ ಹಿಂದೆ ಕೊಟ್ಟಿರತಕ್ಕಂಥ ಎಲ್ಲಾ ಆಸ್ಪತ್ರೆಗಳ ವಿವರ ನನ್ನ ಹತ್ತಿರ ಇದೆ. ಸರ್ಕಾರದ ಆದೇಶ ಸ್ಪಷ್ಟವಾಗಿದ್ದರೂ ಬೇರೆ ಬೇರೆ ಒತ್ತಡಗಳ ಕಾರಣ ಕೆಲವು ವ್ಯತ್ಯಾಸಗಳಾಗಿವೆ ಎಂಬ ವಿಷಯವನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು:- ಜನರ ಆಸ್ಪತ್ರೆಗಾದರೆ ಜನಗಳು ಅರ್ಜಿ ಕೊಟ್ಟು ಕೇಳಬಹುದು, ಆದರೆ, ಜಾನುವಾರುಗಳಿಗೆ ಕೇಳುವುದಕ್ಕೆ ಬರುವುದಿಲ್ಲ. ಜಾನುವಾರುಗಳ ಸಂಖ್ಯೆ ನೋಡದೆ ಒತ್ತಡಕ್ಕೆ ಕೊಟ್ಟುಬಿಟ್ಟರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಬಿ.ಬಿ. ನಿಂಗಯ್ಯ:- ಹಿಂದೆ ಆಗಿರತಕ್ಕಂಥ ಎಲ್ಲಾ ತಪ್ಪುಗಳನ್ನು ಸರಿಪಡಿಸಿ ಒಂದು ವೈಜ್ಞಾನಿಕ ಸರ್ವೇ ಮಾಡಿಸಿದ್ದೇವೆ. ಅದರ ಆಧಾರದ ಮೇಲೆ ಎಲ್ಲೆಲ್ಲಿ ಪ್ರಾದೇಶಿಕ ವ್ಯತ್ಯಾಸ ಇದೆಯೋ ಅದನ್ನು ಸರಿಪಡಿಸಿ ಮಾಡಿಕೊಡುತ್ತೇವೆ.

ವಿಷಯ:- ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಗೆ ಹಣ ಬಿಡುಗಡೆ.

51(645)

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಗೆ 31-1-1997ರ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಆ) ಕೈಗೊಳ್ಳಲಾದ ಕಾಮಗಾರಿಗಳ ಸಹಿತ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಕೊಡಗು ಜಿಲ್ಲೆ ಲೋಕೋಪಯೋಗಿ ಇಲಾಖೆಗೆ 31-1-1997ರ ಅಂತ್ಯದವರೆಗೆ ರೂ. 259.05 ಲಕ್ಷ ಹಣ ಬಿಡುಗಡೆಯಾಗಿರುತ್ತದೆ.

ಆ) ಕಾಮಗಾರಿ ಕೈಗೊಳ್ಳಲಾದ ಬಗ್ಗೆ ತಾಲ್ಲೂಕುವಾರ ವಿವರಗಳನ್ನು ಅನುಬಂಧ-1ರಲ್ಲಿ ನೀಡಿದೆ.